6. 11 ಕೆ.ವಿ.ಜಿ.ಓ.ಎಸ್. ಸೆಟ್‌ಗಳು - 15 ಸೆಟ್‌ಗಳು

7. 3 ಪಿನ್ ಕ್ರಾಸ್ ಆರ್ಮ್‌ಗಳು - 125 ಸೆಟ್‌ಗಳು

ಮಹಾಲಿಂಗಪುರ ಅಥಣಿಗಳಲ್ಲಿರುವ ಉಗ್ರಾಣಗಳಿಂದಲೂ ನೇರವಾಗಿ ಸಾಮಗ್ರಿಗಳನ್ನು ಕಳುಹಿಸಲಾಗಿದೆ.ಈ ವಿವರಗಳನ್ನು ಗಮನಿಸಿದಾಗ, ಮಹಾಲಿಂಗಪುರ ಉಪ ವಿಭಾಗಕ್ಕೆ ಸಾಕಷ್ಟು ಪ್ರಮಾಣದಲ್ಲಿ ವಿದ್ಯುತ್ ಸಾಮಗ್ರಿಗಳನ್ನು ಪೂರೈಕೆ ಮಾಡಲಾಗಿದ್ದು, ಈ ಉಪ ವಿಭಾಗದ ವ್ಯಾಪ್ತಿಗೆ ಒಳಪಡುವ ಮುಧೋಳ ತಾಲ್ಲೂಕಿಗೆ ಯಾವುದೇ ರೀತಿಯ ತಾರತಮ್ಯವಾಗಿರುವುದಿಲ್ಲ.

ಇ) ಇದು ಉದ್ಭವಿಸುವುದಿಲ್ಲ.

ಹುಬ್ಬಳ್ಳಿ-ಧಾರವಾಡದಲ್ಲಿ ಪಡಿತರ ಚೀಟಿಗಳ ವಿತರಣೆ.

2959:(4042)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಒಟ್ಟು ಪಡಿತರ ಚೀಟಿಗಳ ಸಂಖ್ಯೆ ಎಷ್ಟು ಹೊಸ ಪಡಿತರ ಚೀಟಿಗಳ ಸಲುವಾಗಿ ಎಷ್ಟು ಅರ್ಜಿಗಳು ಬಂದಿವೆ, ಅವುಗಳಲ್ಲಿ ಎಷ್ಟು ಜನರಿಗೆ ಪಡಿತರ ಚೀಟಿಗಳನ್ನು ಹಂಚಲಾಗಿದೆ, ಉಳಿದವುಗಳನ್ನು ಯಾವಾಗ ಹಂಚಲಾಗುವುದು?

ಆ) ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿರುವ ಹಸಿರು ಕಾರ್ಡುಗಳ ಸಂಖ್ಯೆ ಎಷ್ಟು ಹಾಗೂ ಹೊಸದಾಗಿ ಕೇಳಿಬಂದ ಅರ್ಜಿಗಳ ಸಂಖ್ಯೆ ಎಷ್ಟು? ಇಲ್ಲಿಯವರೆಗೆ ಎಷ್ಟು ಹೊಸ ಹಸಿರು ಕಾರ್ಡುಗಳನ್ನು ಹಂಚಲಾಗಿದೆ (ವಿವರಗಳನ್ನು ಒದಗಿಸುವುದು)

ಶ್ರೀ ಜಿ.ಬಸವಣ್ಣಪ್ಪ (ಆಹಾರ ಮತ್ತು ನಾಗರೀಕರ ಸರಬರಾಜು ಸಚಿವರು):

ಅ) ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿರುವ ಒಟ್ಟು ಪಡಿತರ ಚೀಟಿಗಳು 1,43,649, ಹೊಸ ಪಡಿತರ ಚೀಟಿಗಳಿಗಾಗಿ ಬಂದ ಅರ್ಜಿಗಳು 13,822

ಪಡಿತರ ಚೀಟಿಗಳನ್ನು ಹಂಚಿದ ವಿವರ.

ಹಸಿರು ಫೋಟೋ ಒಟ್ಟು

471 5279 5788

ಹಂಚಿಕೆ ಕ್ರಮವು ಜಾರಿಯಲ್ಲಿದ್ದು 30.11.98ಕ್ಕೆ ಮುಗಿಸಲು ಪ್ರಯತ್ನಿಸಲಾಗಿದೆ.

ಆ) ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಹಸಿರು ಕಾರ್ಡುಗಳ ಸಂಖ್ಯೆ 17,785 ಹೊಸದಾಗಿ ಹಸಿರು ಕಾಡಿರಗೆ ಬಂದ ಅರ್ಜಿಗಳ ಸಂಖ್ಯೆ: 1507.

ಇಲ್ಲಿಯವರೆಗೆ ಒಟ್ಟು 471 ಹಸಿರು ಕಾರ್ಡುಗಳನ್ನು ಹಂಚಲಾಗಿದೆ. ಉಳಿದ ಅರ್ಜಿಗಳನ್ನು ಈ ತಿಂಗಳ ಒಳಗಾಗಿ ಪರಿಶೀಲಿಸಿ, ಅರ್ಹ ಕುಟುಂಬಗಳಿಗೆ ಪಡಿತರ ಚೀಟಿ ನೀಡಲು ಕ್ರಮ ಕೈಗೊಳ್ಳಲಾಗಿದೆ.

ದೆಹಲಿಯ ಕರ್ನಾಟಕ ಭವನದ ಅವ್ಯವಸ್ಥೆ ಬಗ್ಗೆ

2960:(4040)

ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವದೆಹಲಿಯಲ್ಲಿರುವ ಕರ್ನಾಟಕ ಭವನಗಳು ಅವ್ಯವಸ್ಥೆಯ ಆಗರಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಈ ಅವ್ಯವಸ್ಥೆಯನ್ನು ಸರಿ ಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಇ) ಕೌಟಿಲ್ಯ ರಸ್ತೆಯಲ್ಲಿರುವ ಹಳೆಯ ಕರ್ನಾಟಕ ಭವನ ಕೇವಲ ಅಧಿಕಾರಿಗಳಿಗೆ ಮಾತ್ರವೇ ಮೀಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಶಾಸಕರಿಗೆ, ಸಂತತ್ ಸದಸ್ಯರಿಗೆ ಅಲ್ಲಿ ಸ್ಥಳಾವಕಾಶ ಒದಗಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೇ?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಅ) ಈ ರೀತಿಯ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.